**3**

# ಮೆಸ್ಸೀಯನ ಪ್ರವಾದನೆಗಳು

## ದಾವೀದನ ಕುಮಾರ

## (2 ಸಮುವೇಲ 7:12)

ಸುಮಾರು ಕ್ರಿಸ್ತ ಪೂರ್ವ 1000ರಲ್ಲಿ ಇಸ್ರಾಯೇಲಿನ ಅರಸ, ದಾವೀದನು ದೇವರ ಮನೆಯಾಗಿರುವಂತೆ ಸ್ಥಿರವಾದ ದೇವಾಲಯವನ್ನು ಕಟ್ಟಲು ಬಯಸಿದನು. ಅದಕ್ಕೆ ಉತ್ತರವಾಗಿ ದಾವೀದನಿಗಾಗಿ ಒಂದು ಮನೆಯನ್ನು ಕಟ್ಟುವ ತನ್ನ ಯೋಜನೆಯನ್ನು ದೇವರು ದಾವೀದನಿಗೆ ಹೇಳಿದನು (2 ಸಮುವೇಲ 7:11). ದಾವೀದನಿಗಾಗಿ ದೇವರು ಸಂಕಲ್ಪಿಸಿದ ಮನೆಯು ಕಲ್ಲು, ಕಟ್ಟಿಗೆಗಳಾದಾಗಿರಲಿಲ್ಲ: ಅದು ದಾವೀದನ ಸಂತತಿಯಾಗಿತ್ತು, ಅದು ಒಂದು ಕುಟುಂಬ ಮನೆಯಾಗಿರುವುದು - ಅವನ ವಂಶಜರಾಗಿರುವರು. ದಾವೀದನ ಮಗ ಸೊಲೊಮೋನನ ಬಗ್ಗೆ ದೇವರು ನೇರವಾಗಿ ಮಾತಾಡಿದನು:

> ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು, ನಾನು ಅವನ ರಾಜ್ಯ ಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಕುಮಾರನಾಗಿರುವನು, ... ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತವಾಗಿರುವುದು (2 ಸಮುವೇಲ 7:13, 14ಎ, 16).

ಹೀಗಿದ್ದರೂ, ಪರೋಕ್ಷವಾಗಿ, ದೇವರು ದಾವೀದನ "ಸೇವಕನ ಬಹುದೂರದ ಸಂತಾನದ ವಿಷಯದಲ್ಲಿ" (2 ಸಮುವೇಲ 7:19) ಮಾತಾಡುತ್ತಿದ್ದನು. ಪ್ರವಾದನೆ ಮತ್ತು ವಾಗ್ದಾನವು ಸೊಲೊಮೋನನ ದಿನಗಳನ್ನು ದಾಟಿ ದೂರಕ್ಕೆ ತಲುಪಿತು.

ದೇವರ ವಾಗ್ದಾನವು ಒಂದು ಪ್ರತಿಜ್ಞೆಯ ರೂಪದಲ್ಲಿ ಇಡಲ್ಪಟ್ಟಿತು: "ನನ್ನ ಪವಿತ್ರತ್ವದಲ್ಲಿ ಆಣೆಯಿಟ್ಟು ಒಂದು ಸಂಗತಿ ಹೇಳಿದ್ದೇನೆ; ಅದರ ವಿಷಯದಲ್ಲಿ ದಾವೀದನಿಗೆ ಸುಳ್ಳುಗಾರನಾಗುವದಿಲ್ಲ. ಅದೇನಂದರೆ - ಅವನ ಸಂತತಿಯು ಶಾಶ್ವತವಾಗಿ ಇರುವುದು; ಅವನ ಸಿಂಹಾಸನವು ಸೂರ್ಯನಂತೆ ನನ್ನ ಎದುರಿನಲ್ಲಿರುವುದು" (ಕೀರ್ತನೆ 89:35, 36). "ಯೆಹೋವನು ದಾವೀದನಿಗೆ ಮಾಡಿದ ಪ್ರಮಾಣವು ಸ್ಥಿರವಾಗಿದೆ; ಆತನು ಅದನ್ನು ಬದಲಿಸುವದಿಲ್ಲ: 'ನಿನ್ನ ಸಂತಾನದವರನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು' " (ಕೀರ್ತನೆ 132:11). ಅಧಿಕಾರಿಗಳೂ ಅರಸರೂ ಜನಾಂಗಗಳೂ ದಾವೀದನ ಕುಮಾರನನ್ನು ವಿರೋಧಿಸಿದರೂ (ಕೀರ್ತನೆ 2:1-3), ದೇವರು ತನ್ನ ಪ್ರತಿಜ್ಞೆಯನ್ನು ನೆರವೇರಿಸಲು ತೀರ್ಮಾನಿಸಿದನು. "ನಾನು ನೇಮಿಸಿದ ಅರಸನನ್ನು ಚಿಯೋನೆಂಬ ನನ್ನ ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದನು" (ಕೀರ್ತನೆ 2:6) ಎಂದು ದೇವರು ಹೇಳುವನೆಂದು ಕೀರ್ತನೆಗಾರನು ಮುಂತಿಳಿಸಿದನು.

ದಾವೀದನ ವಾರಸುದಾರನಿಗೆ ದೇವರು ಏನು ಹೇಳುವನೆಂದೂ ಕೀರ್ತನೆಗಾರನು ಮುಂತಿಳಿಸಿದನು: "ನನಗೆ ನೀನು ಕುಮಾರನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ" (ಕೀರ್ತನೆ 2:7).

ದಾವೀದನು ತನ್ನ ವಾರಸುದಾರನ ಬಗ್ಗೆ ವಿಶೇಷವಾದ ಮುಂತಿಳಿಸುವಿಕೆಗಳನ್ನು ಹೇಳುವಂತೆ ದಾವೀದನಿಗೆ ಪರಿಶುದ್ಧಾತ್ಮನು ಅವಕಾಶ ಮಾಡಿಕೊಟ್ಟನು. ದಾವೀದನು ತನ್ನ ವಾರಸುದಾರನನ್ನು ತನ್ನ ಸ್ವಂತ "ಕರ್ತ" ಎಂದು ಕರೆದನು (ಕೀರ್ತನೆ 110:1). ತನ್ನ ಸ್ವಂತ ಮಗುವಿನ ಒಡೆತನದಲ್ಲಿ, ಅಧಿಕಾರದಲ್ಲಿ ತಂದೆಯು ಬರುವುದು ಸಾಮಾನ್ಯವಾದದ್ದಲ್ಲ; ಆದರೂ ದಾವೀದನು ತನ್ನ ಮಗನಿಗಿಂತ ತನಗೆ ಕಿರಿತನವಿರುವದನ್ನು ಸ್ಪಷ್ಟವಾಗಿ ಮುಂತಿಳಿಸಿದನು. ಇದಲ್ಲದೇ, ದಾವೀದನು ತನ್ನ ವಾರಸುದಾರನ ಅಧಿಕಾರದ ಸ್ಥಳವು ಭೂಲೋಕದ ಯೆರೂಸಲೇಮಿನಲ್ಲಿ ಅಲ್ಲ, ಆದರೆ ದೇವರ "ಬಲಗಡೆಯಲ್ಲಿ" ಎಂಬುದನ್ನು ಸ್ಪಷ್ಟವಾಗಿ ಮುಂತಿಳಿಸಿದನು (ಕೀರ್ತನೆ 110:1). ತನ್ನ ಮಗನು ಒಂದೇ ಸಮಯದಲ್ಲಿ ಅರಸನೂ ಯಾಜಕನೂ ಆಗಿರುವನೆಂದು ದಾವೀದನು ಮುಂತಿಳಿಸಿದ ರೀತಿಯು ಅತೀ ಅಸಾಮಾನ್ಯವಾದದ್ದಾಗಿದೆ: " 'ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು' ಎಂದು ಯೆಹೋವನು ಆಣೆಯಿಟ್ಟು ನುಡಿದಿದ್ದಾನೆ" (ಕೀರ್ತನೆ 110:4; ನೋಡಿರಿ ಜೆಕರ್ಯ 6:13). ದಾವೀದನು ಯಾಜಕನಾಗಲಾರನು, ಯಾಜಕನಾಗಿರಲಿಲ್ಲ; ಅವನ ಸಿಂಹಾಸನವು ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ಇದ್ದಿರಲಿಲ್ಲ. ಈ ಮಾತುಗಳಲ್ಲಿ ದಾವೀದನು ತನ್ನ ಮಗನ ಶ್ರೇಷ್ಠತೆಯನ್ನು ಗುರುತಿಸಿದನು.

ಇದಲ್ಲದೇ ದಾವೀದನು ಆ ವ್ಯಕ್ತಿಯನ್ನು "ದೇವರು" ಎಂದು ಕರೆಯುವದರಿಂದ ಆತನ ಸಿಂಹಾಸನವು ಸದಾಕಾಲಕ್ಕೂ ಇರುವದೆಂದು ಹೇಳಿದನು (ಕೀರ್ತನೆ 45:6). ಇಂಥ ಧೈರ್ಯದ ಮುಂತಿಳಿಸುವಿಕೆಯು ಹೇಗೆ ಎಂದಾದರೂ ನೆರವೇರಿಸಲ್ಪಡುವುದು? ದಾವೀದನ ಮಗನಿಗೆ ನಿತ್ಯವಾದ ಸಿಂಹಾಸನವಿರುವುದು, ಆತನು ದಾವೀದನ ಸ್ವಂತ ಕರ್ತನಾಗಿರುವನು, ಆತನು ದೇವರ ಬಲಗಡೆಯಲ್ಲಿ ಇರುವನು. ಆತನು ತನ್ನ ಸಿಂಹಾಸನದ ಮೇಲೆ ಯಾಜಕನಾಗಿರುವನು ಮತ್ತು ಆತನು ದೇವರಾಗಿರುವನು!

ದಾವೀದನ ಮರಣದ ನಂತರ ಇನ್ನೂರು ವರ್ಷಗಳ ನಂತರ ಹೋಶೇಯನು ಭವಿಷ್ಯದಲ್ಲಿ ನೋಡಿದನು. ಅಂತ್ಯದಿನಗಳಲ್ಲಿ ಇಸ್ರಾಯೇಲ್ಯರು ದೇವರನ್ನು "ಹಾಗೂ ತಮ್ಮ ಅರಸ ದಾವೀದನನ್ನು" (ಹೋಶಾಯ 3:5) ಹುಡುಕುವರು ಎಂದು ಹೇಳಿದನು. ವೈಯಕ್ತಿಕವಾಗಿ ಸತ್ತು ಹೋದ ಅರಸನ ಅರ್ಥದಲ್ಲಿ ಹೇಳಲಿಲ್ಲ. ಆದರೆ ಅವನ ಸಂತತಿಯಲ್ಲಿ ಒಬ್ಬನು ಅಧಿಕಾರಯುಕ್ತನಾಗಿ "ದಾವೀದ" ಎಂದು ಕರೆಯಲ್ಪಡುವನು ಎಂದು ಅವನು ಹೇಳಿದನು.

ಮುಂದೆ ಬರಲಿಕ್ಕಿರುವ ದಾವೀದನ ಉತ್ತರಾಧಿಕಾರಿಯು, ಎಂಟನೆಯ ಶತಮಾನದ ಪ್ರವಾದಿ ಯೆಶಾಯನ ಪ್ರಕಾರವಾಗಿ ತನ್ನ ಪ್ರಸಿದ್ಧ ತಂದೆಗಿಂತ ಮಿಗಿಲಾಗಿರುವನು. "ದಾವೀದನನ ಸಿಂಹಾಸನದ ಮೇಲೆ ಹಾಗೂ ಆತನ ರಾಜ್ಯದ ಮೇಲೆ" ಗೌರವದ ಬಿರುದುಗಳಿರುವವು. ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂದು ನೇಮಿಸಲ್ಪಟ್ಟಿರುವನು (ಯೆಶಾಯ 9:6, 7). ಆತನಿಗಿರುವ ಆಡಳಿತೆಯ ರೀತಿಯು ಮುಂತಿಳಿಸಲ್ಪಟ್ಟಿತು: "ಸಿಂಹಾಸನವು ಕೃಪಾಧಾರದ ಮೇಲೆ ಸ್ಥಾಪಿತವಾಗಿದೆ; ರಾಜ್ಯಭಾರ ಪ್ರವೀಣನೂ ಧರ್ಮಾಸಕ್ತನೂ ನ್ಯಾಯನಿಪುಣನೂ ಆದವನು ದಾವೀದನ ಗುಡಾರದಲ್ಲಿನ ಸಿಂಹಾಸನದ ಮೇಲೆ ಸತ್ಯಪರನಾಗಿ ಕುಳಿತಿದ್ದಾನೆ" (ಯೆಶಾಯ 16:5).

ಎಲ್ಲಾ ಅಧಿಕಾರವನ್ನು ಆತನಿಗೆ ಕೊಡುವದನ್ನು ದೇವರು ವಾಗ್ದಾನ ಮಾಡಿದನು: "ಅವನು ದಾವೀದನ ಮನೆಯ ಬೀಗದ ಕೈಯನ್ನು ತನ್ನ ಹೆಗಲಮೇಲೆ ವಹಿಸಿಕೊಳ್ಳುವಂತೆ

ಮಾಡುವೆನು; ಅವನು ತೆರೆದರೆ ಯಾರೂ ಮುಚ್ಚರು, ಮುಚ್ಚಿದರೆ ಯಾರೂ ತೆರೆಯರು" (ಯೆಶಾಯ 22:22). ಈ ವಾರಸುದಾರನ ಮುಖಾಂತರ, ಜನರು "ದಾವೀದನಗೆ ಖಂಡಿತವಾಗಿ ವಾಗ್ದಾನ ಮಾಡಿದ ಪ್ರವಾದನೆಗಳು" (ಯೆಶಾಯ 55:3) ಎಂದು ವಿವರಿಸಿದ, ದೇವರ ನಿತ್ಯವಾದ ಒಡಂಬಡಿಕೆಯಲ್ಲಿ ಪಾಲುಗಾರರಾಗಲು ಆಹ್ವಾನಿಸಲ್ಪಡುವರು ಎಂದು ಯೆಶಾಯನು ಹೇಳಿದನು, ದಾವೀದನ ಮರಣದ ನಂತರ ನಾಲ್ಕುನೂರು ವರ್ಷಗಳ ತರುವಾಯ ಪರಲೋಕದ ನಿಶ್ಚಿಯವಾದ ವಾಗ್ದಾನವನ್ನು ತಿಳಿಸಿ, ದೃಢಪಡಿಸಲು ದೇವರು ಯೆರೆಮೀಯನನ್ನು ಉಪಯೋಗಿಸಿದನು (ಯೆರೆಮೀಯ 33:20, 21).

ದಾವೀದನ ಮರಣದ ನಂತರ ಐದು ಶತಮಾನಗಳಾದ ಮೇಲೆ ಯೆಹೂದ್ಯರು ಬಬಿಲೋನಿನಲ್ಲಿದ್ದಾಗ, ದೇವರು ದಾವೀದನ ಬಗೆಗಿನ ತನ್ನ ವಾಗ್ದಾನವನ್ನು ಪುನಃ ಸ್ಥಿರಪಡಿಸಿದನು; "ನನ್ನ ಹಿಂಡನ್ನು ಕಾಯಲಿಕ್ಕೆ ಒಬ್ಬನೇ ಕುರುಬನನ್ನು ಏರ್ಪಡಿಸುವೆನು; ನನ್ನ ಸೇವಕನಾದ ದಾವೀದನೆಂಬ ಆ ಕುರುಬನು ಅದನ್ನು ಮೇಯಿಸುವನು; ... ಯೆಹೋವನಾದ ನಾನು ನನ್ನ ಜನರ ದೇವರಾಗಿರುವೆನು; ನನ್ನ ಸೇವಕನಾದ ದಾವೀದನು ಅವರನ್ನಾಳುವ ಪ್ರಭುವಾಗಿರುವನು ..." (ಯೆಹೆಜ್ಕೇಲು 34:23, 24). ಹೋಶೇಯನ ಪ್ರವಾದನೆಯಲ್ಲಿ ಆತನು ಮಾಡಿದಂತೆಯೇ ದಾವೀದನ ಉತ್ತರಾಧಿಕಾರಿಗೆ ಸಂಬಂಧಿಸಿ, ಅವನೇ ದಾವೀದನೆಂಬವನ ದೇವರು ಯೆಹೆಜ್ಕೇಲಿನ ಮುಖಾಂತರ ಮಾತಾಡಿದನು. ಆಗ ದೇವರು, "ನನ್ನ ಸೇವಕನಾದ ದಾವೀದನು ಅವರಿಗೆ ರಾಜನಾಗಿರುವನು; ... ನನ್ನ ಸೇವಕನಾದ ದಾವೀದನು ಅವರಿಗೆ ಸಾದಾ ಪ್ರಭುವಾಗಿರುವನು" (ಯೆಹೆಜ್ಕೇಲ 37:24, 25) ಎಂದು ವಾಗ್ದಾನವನ್ನು ಪುನಃ ಹೇಳಿದನು.

"ದೂರದ ಭವಿಷ್ಯಕ್ಕಾಗಿದ್ದ" (2 ಸಮುವೇಲ 7:19) ದಾವೀದನ ದೈವಿಕ ವಾರಸುದಾರನನ್ನು ಕುರಿತು ಆಶ್ಚರ್ಯಕರವಾದ ಮುಂತಿಳಿಸುವಿಕೆಗಳ ನೆರವೇರುವಿಕೆಯು ದಾವೀದನು ತನ್ನ ಸಮಾಧಿಯಲ್ಲಿದ್ದು ಒಂದು ಸಾವಿರ ವರ್ಷಗಳಾದ ನಂತರ ಪ್ರಾರಂಭವಾಯಿತು. ದೇವದೂತ ಗಬ್ರಿಯೇಲನು, ಮರಿಯಳು ಎಂಬ ಹೆಸರಿನ ಭಯಗೊಂಡ ನಜರೇತಿನ ಮಹಿಳೆಯ ಬಳಿಗೆ ಕಳುಹಿಸಲ್ಪಟ್ಟನು. ಆಕೆಗೆ ಒಬ್ಬ ಕುಮಾರನು ಜನಿಸುವನೆಂದು ಹೇಳಿದನು. "ಆತನು ಮಹಾ ಪುರುಷನಾಗಿ ಮಹೋನ್ನತನ ಕುಮಾರನೆಂದು ಕರೆಯಲ್ಪಡುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ತಂದೆಯಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು" (ಲೂಕ 1:32) ಎಂದು ಅವನು ಆಕೆಗೆ ಭರವಸೆಕೊಟ್ಟನು. ಗಬ್ರಿಯೇಲನ ಸಂದೇಶವು ದೇವರು ಬಹಳ ಸಮಯದ ಹಿಂದೆ ಮಾಡಿದ ತನ್ನ ವಾಗ್ದಾನವನ್ನು ನೆರವೇರಿಸುವದಾಗಿತ್ತು: "ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಕುಮಾರನಾಗಿರುವನು" (2 ಸಮುವೇಲ 7:14ಎ). "ಆ ಪರಿಶುದ್ಧ ಶಿಶು, ದೇವರ ಕುಮಾರನೆಂದು ಕರೆಯಲ್ಪಡುವನು" (ಲೂಕ 1:35) ಎಂದು ಆತನು ಮರಿಯಳಿಗೆ ಹೇಳಿದನು.

ಯೆಹೂದ್ಯರು ಕ್ರಿಸ್ತನನ್ನು ವಿಶ್ವದ ಕರ್ತನಂತೆ ಅಲ್ಲ, ಆದರೆ ದಾವೀದನ ದೈಹಿಕ ಮಗನಂತೆ ಮಾತ್ರವೇ ದೃಷ್ಟಿಸಿದರು. ಹೀಗಿದ್ದರೂ, ದಾವೀದನು ತಾನೇ, ತನ್ನ ಕುಮಾರನು ತನ್ನ ಸ್ವಂತ ಒಡೆಯನಾಗಿರುವನು ಎಂದು ಮುಂತಿಳಿಸಿದ್ದನ್ನು ಯೇಸು ಸೂಚಿಸಿದಾಗ ಅವರಿಂದ ಯಾವ ಮಾತೂ ಬರಲಿಲ್ಲ (ಮತ್ತಾಯ 22:41-46).

ದಾವೀದನಾಗಲೀ, ಯಾರೇ ಆಗಲಿ ಎಂದೂ ಮಾಡದದ್ದನ್ನು ಯೇಸು ಮಾಡಿದನು "ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದರಿಂದ ಕೊಳೆಯುವ ಅವಸ್ಥೆಗೆ ಸೇರಿಸಲ್ಪಡಲಿಲ್ಲ" (ಅಪೊಸ್ತಲರ ಕೃತ್ಯ 13:34). ಎಂಟು ಶತಮಾನಗಳ ಮೊದಲು ಯೆಶಾಯನು ಮುಂತಿಳಿಸಿದಂತೆ (55:3) ಆತನು ಆಗ, "ದಾವೀದನ ಪವಿತ್ರವಾದ ಮತ್ತು ನಿಶ್ಚಿತವಾದ

ಆಶೀರ್ವಾದಗಳನ್ನು" ಸ್ವೀಕರಿಸಲು ಸಿದ್ಧನಾದನು (ಅಪೊಸ್ತಲರ ಕೃತ್ಯ 13:34). ದಾವೀದನಿಗೆ ವಾಗ್ದಾನ ಮಾಡಲ್ಪಟ್ಟ ನಿಶ್ಚಯವಾದ ಆಶೀರ್ವಾದವು, ದಾವೀದನ ಸಿಂಹಾಸನದ ಮೇಲೆ ಅವನ ವಾರಸುದಾರನು ಯಾವಾಗಲೂ ಇರುವನು ಎಂಬುದು (2 ಸಮುವೇಲ 7:12-14), ಆಶ್ಚರ್ಯಕರವಾದ ಎಂದೂ ಸಾಯದವನಾದ ವಾರಸು ದಾರನಲ್ಲಿ ನೆರವೇರಿತು.

ದೇವರ ಯೋಜನೆಯಲ್ಲಿ ಯೇಸುವಿನ ಪುನರುತ್ಥಾನವು ಬಹಳ ಮಹತ್ವದ್ದಾಗಿತ್ತು. "ನನ್ನ ಕುಮಾರನಾಗಿರುವಂತೆ" "ಇಂದು ನಾನು ನಿನ್ನನ್ನು ಹಡೆದಿದ್ದೇನೆ" (ಕೀರ್ತನೆ 2:7ಬಿ; ನೋಡಿರಿ ಅಪೊಸ್ತಲರ ಕೃತ್ಯ 13:33; ರೋಮಾಪುರ 1:4) ಎಂದು ಮುಂತಿಳಿಸಿರುವ ದೇವರು ಅದನ್ನು ತೋರಿಸಿದನು. ಒಂದು ಅರ್ಥದಲ್ಲಿ ಯೇಸು ತನ್ನ ಪುನರುತ್ಥಾನಕ್ಕಿಂತ ಮೂವತ್ತುಮೂರು ವರುಷಗಳ ಹಿಂದೆ ಯೇಸು ದೇವರ ಕುಮಾರನೆಂದು ಕರೆಯಲ್ಪಟ್ಟನು (ಲೂಕ 1:35). ಹೀಗಿದ್ದರೂ, ಸಾಂಕೇತಿಕ ಅರ್ಥದಲ್ಲಿ, ಆತನ ಪುನರುತ್ಥಾನದ ದಿನವು ಆತನು ದೇವರ ಕುಮಾರನಾದ ದಿನವಾಗಿತ್ತು (ಅಪೊಸ್ತಲರ ಕೃತ್ಯ 13:33).

ಪುನರುತ್ಥಾನವಾದ ಐವತ್ತು ದಿನಗಳ ನಂತರ, ಯೇಸು ಪರಲೋಕದಲ್ಲಿ ದಾವೀದನ ಆತ್ಮಿಕ ಸಿಂಹಾಸನದ ಮೇಲೆ, ದೇವರ ಬಲಗಡೆಯಲ್ಲಿ ತನ್ನ ಸ್ಥಾನ ತೆಗೆದು ಕೊಂಡನು (ಅಪೊಸ್ತಲರ ಕೃತ್ಯ 2:29-31). ಇದು ಹಲವಾರು ಮುಂತಿಳಿಸುವಿಕೆಗಳನ್ನು ನೆರವೇರಿಸಿತು: ಕೀರ್ತನೆ 2:6; 132:11; 89:34-37; ಯೆಶಾಯ 9:6, 7; 16:5; ಹೋಶೇಯ 3:5; ಯೆರೆಮೀಯ 33:20, 21; ಯೆಹೆಜ್ಕೇಲ 34:23, 24; 37:24, 25. ಪುನರುತ್ಥಾನದಲ್ಲಿ ತನ್ನ ಪ್ರಥಮ ನೆರವೇರುವಿಕೆಯಲ್ಲಿ ಅದೇ ಪ್ರವಾದನೆಯು ಸಹ ("ಇಂದು ನಾನು ನಿನ್ನನ್ನು ಹಡೆದಿದ್ದೇನೆ"; ಕೀರ್ತನೆ 2:7) ಪಂಚಾಶತ್ತಮ ದಿನದಂದು ಯೇಸುವಿನ ಸಿಂಹಾಸನಾರೋಹಣದಲ್ಲಿ ನೆರವೇರಿಸಲ್ಪಟ್ಟಿತು (ಇಬ್ರಿಯ 1:1-5). ಆ ದಿನ ಆತನು ದೇವರ ಬಲಗಡೆಯಲ್ಲಿ ಕುಳಿತು ಕೊಂಡನು, ಕೀರ್ತನೆ 110:1ರ ನೆರವೇರುವಿಕೆಯಲ್ಲಿ ಪ್ರಮುಖ ಸ್ಥಾನ ತೆಗೆದು ಕೊಂಡು, ಎಲ್ಲಾ ಅಧಿಕಾರ ಹೊಂದಿಕೊಂಡನು (ಅಪೊಸ್ತಲರ ಕೃತ್ಯ 2:34; ಇಬ್ರಿಯ 1:3). ಮುಂತಿಳಿಸಲ್ಪಟ್ಟಂತೆ, ದಾವೀದನ ಬೀಗದ ಕೈಗಳು (ಯೆಶಾಯ 22:22) ಯೇಸುವಿಗೆ ಕೊಡಲ್ಪಟ್ಟವು (ಪ್ರಕಟವೆ 3:7). ದೇವರು, ಪರಲೋಕದಲ್ಲಿಯ ಯೇಸುವನ್ನು "ದೇವರು" ಎಂದು ಕರೆದನು (ಕೀರ್ತನೆ 45:6; ಇಬ್ರಿಯ 1:8, 9).

ಇದಲ್ಲದೆ, ಯೇಸು ಅರಸನಾಗಿ ಕಿರೀಟ ಹೊಂದಿದ ದಿನ, ಆತನು ಮಹಾ ಯಾಜಕನಾಗಿಯೂ ಮಾಡಲ್ಪಟ್ಟನು (ಇಬ್ರಿಯ 5:5). ಇದೂ ಸಹ ಮುಂತಿಳಿಸಲ್ಪಟ್ಟಿತ್ತು (ಕೀರ್ತನೆ 110:4). ಕೇಳದಂಥ ಮತ್ತು ಮರೆಯಲಾಗದಂಥ ಮುಂತಿಳಿಸುವಿಕೆಗಳು ಜಾಗರೂಕತೆಯಿಂದ ನೆರವೇರಿಸಲ್ಪಟ್ಟವು! ದಾವೀದನ ಕುಮಾರನು ಮರಣವನ್ನು ಸದಾಕಾಲಕ್ಕೂ ಜಯಿಸಿದನು, ದೇವರ ಕುಮಾರನು ಎಂದು ಕರೆಯಲ್ಪಟ್ಟನು, ಪರಲೋಕದಲ್ಲಿ ದೇವರ ಬಲಗಡೆಯಲ್ಲಿ ದಾವೀದನ ಒಡೆಯನಾಗಿ ಮಾಡಲ್ಪಟ್ಟನು, ಎಲ್ಲಾ ಅಧಿಕಾರ ಹೊಂದಿಕೊಂಡನು, ಮಹಾ ಯಾಜಕನಾದನು. "ದೇವರು" ಎಂದು ನಮಸ್ಕರಿಸಲ್ಪಟ್ಟನು.

ಹಿಂದಿರುಗಿ ನೋಡಿ, "ದಾವೀದನ ಕುಮಾರನು" ಪ್ರವಾದನೆಯಲ್ಲಿ ಅನೇಕ ಮುಂತಿಳಿಸುವಿಕೆಗಳು ಒಳಗೊಂಡಿರುವದನ್ನು ಒಬ್ಬನು ನೋಡಬಹುದು. ವಾಗ್ದಾನದಾತನು ದಾವೀದನ ವಂಶಜನು (2 ಸಮುವೇಲ 7:12), ದಾವೀದನು (ಹೋಶೇಯ 3:5), ದಾವೀದನ ಒಡೆಯನು (ಕೀರ್ತನೆ 110:1), ಕುರುಬನು (ಯೆಹೆಜ್ಕೇಲ 37:24, 25), ಯಾಜಕನು (ಕೀರ್ತನೆ 110:4), ಅದ್ಭುತಸ್ವರೂಪನು ಆಲೋಚನಾಕರ್ತನು (ಯೆಶಾಯ 9:6), ಸರ್ವ ಶಕ್ತನಾದ ದೇವರು (ಯೆಶಾಯ 9:6), ನಿತ್ಯನಾದ ತಂದೆ (ಯೆಶಾಯ 9:6), ಸಮಾಧಾನದ ಪ್ರಭು (ಯೆಶಾಯ 9:6), ದೇವರ ಕುಮಾರನು (2 ಸಮುವೇಲ 7:14) ಹಾಗೂ ದೇವರು (ಕೀರ್ತನೆ 45:6) ಆಗಿರುವನು. ಆತನಿಗೆ ದಾವೀದನ ಸಿಂಹಾಸನ

(ಕೀರ್ತನೆ 89:35, 36), ದಾವೀದನ ಬೀಗದ ಕೈಗಳು (ಯೆಶಾಯ 22:22) ಮತ್ತು ದಾವೀದನ ನಂಬಿಕಸ್ತ ದಯಗಳು (ಯೆಶಾಯ 55:3) ಇರುವವು.

## ಬೇತ್ಲೆಹೇಮಿನವನು

## (ಮೀಕ 5:2)

ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ದೇವರ ವಾಕ್ಯವು ಮೋರೆಷೆತ್ತಿನ ಮೀಕನಿಗೆ ಬಂದಿತು, ಇತರ ಮುಂತಿಳಿಸುವಿಕೆಗಳಲ್ಲಿ ಪ್ರಸಿದ್ಧಿಯಿಲ್ಲದ ಗ್ರಾಮವು ಪ್ರಸಿದ್ಧಗೊಳ್ಳಲು ನೇಮಕವಾಗಿರುವದರ ಬಗ್ಗೆ ಕರ್ತನು ಸ್ಪಷ್ಟಪಡಿಸಿದನು: "ಎಫ್ರಾತದ ಬೇತ್ಲೆಹೇಮೇ, ... ಇಸ್ರಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವೂ ಪುರಾತನವೂ ಅನಾದಿಯೂ ಆದದ್ದು" (ಮೀಕ 5:2).

ಏಳುನೂರು ವರ್ಷಗಳಿಗಿಂತ ಹೆಚ್ಚು ಸಮಯದ ನಂತರ, ಒಬ್ಬ ಗಂಡ ಹಾಗೂ ಅವನ ಹೆಂಡತಿ (ಕನ್ಯೆಯಾಗಿದ್ದವಳು ಮತ್ತು ಗರ್ಭಿಣಿಯಾಗಿದ್ದವಳು) ನಜರೇತಿನಿಂದ ಬೇತ್ಲೆಹೇಮಿಗೆ ಪ್ರಯಾಣ ಬೆಳಸಿದರು. ಅವರು ಅಲ್ಲಿದ್ದಾಗ ಆಕೆಯ ಚೊಚ್ಚಲ ಮಗನು ಜನಿಸಿದನು. ಆಗ, ನಕ್ಷತ್ರದಿಂದ ನಡಿಸಲ್ಪಟ್ಟು, ಯೆಹೂದ್ಯರ ಅರಸನಾಗಿ ಹೊಸದಾಗಿ ಹುಟ್ಟಿದಾತನನ್ನು ಕುರಿತು ವಿಚಾರಿಸುತ್ತ ಪಂಡಿತರು ಬಂದರು. ಅರಸನಾದ ಮಹಾ ಹೆರೋದನು ಗಲಿಬಿಲಿಗೊಂಡನು. ಅವರು ಹುಡುಕುತ್ತಿರುವ ಅರಸನು ಪ್ರವಾದನೆಯ ಕ್ರಿಸ್ತನಾಗಿರಬಹುದೆಂದು ಆಶ್ಚರ್ಯಪಟ್ಟನು. ಕ್ರಿಸ್ತನ ಜನನದ ಸ್ಥಳವು ಮುಂತಿಳಿಸಲ್ಪಟ್ಟಿದೆ ಯೆಂಬುದನ್ನು ಸ್ಪಷ್ಟವಾಗಿ ತಿಳಿದು ಕೊಂಡನು, ಆದರೆ ಯಾವ ಪಟ್ಟಣದ ಹೆಸರು ಹೇಳಲ್ಪಟ್ಟಿದೆಯೆಂಬುದನ್ನು ತಿಳಿಯಲು ಗಮನಕೊಡಲಿಲ್ಲ. ಕ್ರಿಸ್ತನು ಹುಟ್ಟಬೇಕಾದದ್ದು ಎಲ್ಲಿ ಎಂಬುದನ್ನು ನಿಶ್ಚಿತವಾಗಿ ತಿಳಿದು ಕೊಂಡರೆ, ವಿರೋಧಿ ಅರಸನನ್ನು ಕಂಡುಕೊಂಡು ಅವನನ್ನು ತೆಗೆದು ಹಾಕಬಹುದು ಎಂದು ಅವನು ಯೋಚಿಸಿದನು. "ಅವನು ಯೆಹೂದ್ಯರ ಎಲ್ಲಾ ಮಹಾ ಯಾಜಕರನ್ನೂ ಶಾಸ್ತ್ರಿಗಳನ್ನೂ ಕೂಡಿಸಿ, ಮೆಸ್ಸೀಯನು ಹುಟ್ಟಬೇಕಾದದ್ದು ಎಲ್ಲಿ ಎಂಬುದಾಗಿ ವಿಚಾರಿಸಿದನು" (ಮತ್ತಾಯ 2:4). ಹಳೇ ಒಡಂಬಡಿಕೆಯನ್ನು ಚೆನ್ನಾಗಿ ಓದಿದವರು, "ಯೆಹೂದ ಸೀಮೆಯ ಬೇತ್ಲೆಹೇಮಿನಲ್ಲಿಯೇ; ಯಾಕಂದರೆ ಇದು ಪ್ರವಾದಿಯಿಂದ ಬರೆಯಲ್ಪಟ್ಟಿದೆ" (ಮತ್ತಾಯ 2:5) ಎಂದು ಉತ್ತರಕೊಟ್ಟರು.

ವರ್ಷಗಳ ನಂತರ, ಇನ್ನೊಂದು ಘಟನೆಯು ಕ್ರಿಸ್ತನ ಜನನದ ಪಟ್ಟಣದ ಗುರುತು ಯೆಹೂದ ಮನಸ್ಸಿನಲ್ಲಿತ್ತು ಎಂಬುದನ್ನು ದೃಢಪಡಿಸಿತು. ಅವರು ಈ ರೀತಿ ವಾದಿಸಿದರು: "ದಾವೀದನ ಸಂತಾನದಿಂದಲೂ ದಾವೀದನು ಇದ್ದ ಬೇತ್ಲೆಹೇಮ ಎಂಬ ಗ್ರಾಮದಿಂದಲೂ ಕ್ರಿಸ್ತನು ಬರುವನು ಎಂಬುದಾಗಿ ಪರಿಶುದ್ಧ ಬರಹದಲ್ಲಿ ಉಂಟಲ್ಲವೇ?" (ಯೋಹಾನ 7:42).

## ಐಗುಪ್ತದೊಳಗಿಂದ ಹೊರಗೆ ಕರೆಯಲ್ಪಟ್ಟವನು

## (ಹೋಶೇಯ 11:1)

ಒಂದುಗೂಡಿಸಲ್ಪಟ್ಟು, ಕೆಲವು ಮೂರು ಮಿಲಿಯನ್ ಇಸ್ರಯೇಲ ಜನರು ಕರ್ತನಿಂದ ಒಬ್ಬ ವ್ಯಕ್ತಿಯಂತೆ ನೋಡಲ್ಪಟ್ಟರು ಹಾಗು ತಂದೆಗೆ ಮಗನಂತೆ ದೇವರಿಗೆ ಸಂಬಂಧಿಸಲ್ಪಟ್ಟಿದ್ದರು: "ಇಸ್ರಯೇಲು ನನ್ನ ಮಗ ಎಂದು ಕರ್ತನು ಹೇಳುತ್ತಾನೆ ..." (ವಿಮೋಚನಕಾಂಡ 4:22ಬಿ). ಈ ಮಗನು ಬಹಳ ಪ್ರೀತಿಯ ಮಗನು. ದಯೆಯುಳ್ಳ

ತಂದೆಯು ತನ್ನ ಮಗನ ಐಗುಪ್ತದ ದಾಸಿತ್ವದ ಕಠಿಣತೆಗೆ ದುಃಖ ಹೊಂದಿದವನಾದನು. ದಯೆಯುಳ್ಳ ತಂದೆ ಪರಿಹಾರ ಕಳುಹಿಸಿದನು. ಬಲವಾದ ಹಸ್ತದಿಂದ ಹಾಗೂ ಹೊರಚಾಚಿದ ತೋಳಿನಿಂದ, ಮೋಶೆಯನ್ನು ನಾಯಕನಾಗಿ ನೇಮಿಸಿಕೊಂಡು ದೇವರು ಫರೋಹನ ಅಮಾನುಷ ಸೇವೆಯಿಂದ ತನ್ನ ಮಗನನ್ನು ಬಿಡುಗಡೆ ಮಾಡಿದನು. "ಇಸ್ರಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯಿಟ್ಟು ಆ ನನ್ನ ಮಗನನ್ನು ಐಗುಪ್ತದಿಂದ ಕರೆದೆನು" (ಹೋಶೇಯ 11:1). ದೇವರ ಮಗ ಎಂದು ಕರೆಯಲ್ಪಟ್ಟ ಬಾಲ್ಯದ ಜನಾಂಗವು ಐಗುಪ್ತದಿಂದ ಹೊರಗೆ ಪ್ರಯಾಣ ಮಾಡಿ ಇಸ್ರಯೇಲ ನಾಡಿಗೆ ಇಲ್ಲವೇ ಪಲೇಸ್ತೀನಿಗೆ ಹೋಯಿತು.

ಕ್ರಿ.ಪೂ. 750ರ ಸುಮಾರಿಗೆ, ತಾನು ಇಸ್ರಾಯೇಲನ್ನು ಪ್ರೀತಿಸಿದನು ಮತ್ತು ತನ್ನ ಮಗನನ್ನು ಐಗುಪ್ತದಿಂದ ಹೊರಗೆ ಕರೆದೆನು ಎಂದು ಬರೆಯಲು ದೇವರು ಹೋಶೇಯ ನನ್ನು ಪ್ರೇರೇಪಿಸಿದನು. ಆತನು ಹಿಂದಿನದನ್ನು ಜ್ಞಾಪಕಕ್ಕೆ ತರುತ್ತಿದ್ದನು ಮತ್ತು ಮುಂದೆ ನೋಡುತ್ತಿದ್ದನು, ಒಂದೇ ಸಮಯದಲ್ಲಿ ಆತನು ಹಿಂದೆ ನೋಡುತ್ತಿದ್ದನು ಹಾಗೂ ಮುಂದಿನದನ್ನು ಹೇಳುತ್ತಿದ್ದನು. 750 ವರ್ಷಗಳ ಹಿಂದೆ ದೇವರ ಮಗನು (ಅನಂತರದಲ್ಲಿ ಇಸ್ರಯೇಲ ಜನಾಂಗ ಎಂದು ಕರೆಯಲ್ಪಟ್ಟಿತು) ಪಲೆಸ್ತೀನಿಗೆ ಹೋಗಲು ಐಗುಪ್ತವನ್ನು ಬಿಟ್ಟ ಸಮಯವನ್ನು ಆತನು ನೋಡಿದನು. ಪುನಃ ಕೆಲವು 750 ವರ್ಷಗಳ ಮುಂದೆ ಇನ್ನೊಬ್ಬ ದೇವರ ಕುಮಾರನ ಕಡೆಗೆ, ದೇವರ ಅದ್ವಿತೀಯ ಕುಮಾರನ ಕಡೆಗೆ, ಪಲೆಸ್ತೀನಿಗೆ, ಇಸ್ರಯೇಲ ನಾಡಿಗೆ ಹೋಗಲು ಐಗುಪ್ತವನ್ನು ಬಿಟ್ಟಿದ್ದನ್ನು ನೋಡಿದನು. ಇಸ್ರಯೇಲ ಯೌವ್ವನ ಪ್ರಾಯದ ಜನಾಂಗವಾಗಿದ್ದ, ಮಗುವಾಗಿದ್ದ ಸಮಯಕ್ಕೆ ಹಿಂದಿರುಗಿ ನೋಡಿದನು. ಇಸ್ರಯೇಲಿನ ಪ್ರತಿರೂಪವಾದ, ಯೇಸುವು ಶಿಶುವಾಗಿ ಬರುವ ಸಮಯಕ್ಕೆ ಆತನು ಮುನ್ನೋಡಿದನು. ದುಷ್ಟ ಅರಸನಾದ ಫರೋಹನು, ದೇವರ ಮಗನನ್ನು ಹಿಂಸಿಸಿದ ಸಮಯವನ್ನು ಹಿಂದಿರುಗಿ ನೋಡಿದನು. ಇನ್ನೊಬ್ಬ ದುಷ್ಟ ಅರಸ, ಹೆರೋದನು ದೇವರ ಕುಮಾರನನ್ನು ನಾಶಮಾಡಲು ಹುಡುಕಿದ ದಿನದ ಸಮಯವನ್ನು ಮುನ್ನೋಡಿದನು.

ಇಸ್ರಯೇಲಿನ ಹಿಂದಿನ ಕಾಲವನ್ನು ದೇವರು ಜ್ಞಾಪಿಸಿಕೊಂಡಂತೆ, ಹೋಶೇಯನ ಲೆಕ್ಕಣಿಯ ಮುಖಾಂತರ ಭವಿಷ್ಯಕ್ಕಾಗಿ ಸಂದೇಶವನ್ನು ಕಳುಹಿಸಿದನು. ಮತ್ತಾಯ 2:19-21ರಲ್ಲಿ ಅರ್ಥವು ಪ್ರಕಟಿಸಲ್ಪಟ್ಟಿದೆ:

> ಹೆರೋದನು ತೀರಿಹೋದ ಮೇಲೆ ಐಗುಪ್ತ ದೇಶದಲ್ಲಿ ಕರ್ತನ ದೂತನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು "ನೀನು ಎದ್ದು ಕೂಸನ್ನೂ ಅದರ ತಾಯಿಯನ್ನು ಕರಕೊಂಡು ಇಸ್ರಾಯೇಲ್ ದೇಶಕ್ಕೆ ಹೋಗು; ಕೂಸಿನ ಪ್ರಾಣವನ್ನು ತೆಗೆಯಬೇಕೆಂದಿದ್ದವನು ಸತ್ತು ಹೋದನು." ಆಗ ಯೋಸೇಫನು ಎದ್ದು ಕೂಸನ್ನೂ ಅದರ ತಾಯಿಯನ್ನೂ ಕರಕೊಂಡು ಇಸ್ರಾಯೇಲ್ ದೇಶಕ್ಕೆ ಬಂದನು.

ಯೋಸೇಫನು ದೇವದೂತನಿಗೆ ವಿಧೇಯನಾದಾಗ, ಯೋಶೇಯ 11:1ರ ಮುಂತಿಳಿಸಿದ ಅರ್ಥವನ್ನು ನೆರವೇರಿಸುವದರಲ್ಲಿ ಅವನು ದೇವರ ಸಹಾಯಕನಾಗಿದ್ದನು. "ಇದರಿಂದ ನನ್ನ ಮಗನನ್ನು ಐಗುಪ್ತ ದೇಶದೊಳಗಿಂದ ಕರೆದೆನೆಂದು ಕರ್ತನು ಪ್ರವಾದಿಯ ಮೂಲಕ ಹೇಳಿದ ಮಾತು ನೆರವೇರಿತು" (ಮತ್ತಾಯ 2:15) ಎಂದು ಮತ್ತಾಯನು ದಾಖಲೆ ಮಾಡಿದ್ದಾನೆ.

ಆದುದರಿಂದ ಹೋಶೇಯ 11:1 ವಚನವು ಹಳೇ ಒಡಂಬಡಿಕೆಯ ಸ್ಪಷ್ಟವಾದ ಅರ್ಥಗಳೊಂದಿಗೆ ಹಾಗೂ ಇನ್ನೂ ಹೆಚ್ಚಾದ ಹೊಸ ಒಡಂಬಡಿಕೆಯ ಮಹತ್ವಗಳೊಂದಿಗೆ

ಹಳೇ ಒಡಂಬಡಿಕೆಯ ಅಪೂರ್ವವಾದ ಹೇಳಿಕೆಯಾಗಿದೆ.

## ಮೂವತ್ತು ನಾಣ್ಯಗಳಿಗೆ ಮಾರಲ್ಪಟ್ಟನು
## (ಜೆಕರ್ಯ 11:12)

ಆರನೆಯ ಶತಮಾನದ ಪ್ರವಾದಿ ಜೆಕರ್ಯನ ಪ್ರಕಾರವಾಗಿ ಕಪಟಿಗಳಾದ ಒಳಸಂಚುಗಾರನು ರಕ್ತಕ್ಕಾಗಿ ತನ್ನ ಸಂಬಳವನ್ನು ಹೊಂದಿಕೊಳ್ಳುವನು: "ನಿಮಗೆ ಸರಿಯಾಗಿ ತೋರಿದರೆ ನನಗೆ ಸಂಬಳವನ್ನು ಕೊಡಿರಿ; ಇಲ್ಲವಾದರೆ ಬಿಡಿರಿ!" (ಜೆಕರ್ಯ 11:12ಎ). ಕಪಟಿಯ  ಜೊತೆ ಒಳಸಂಚುಗಾರರು ಅವನ ಶರತ್ತುಗಳಿಗೆ ಒಪ್ಪಿಕೊಳ್ಳುವರು ಎಂದು ಪ್ರವಾದಿಯು ಮುಂದಾಗಿ ಹೇಳಿದನು ಮತ್ತು ಮುಂತಿಳಿಸುವವನು ಈ ಮಾತುಗಳನ್ನು ದ್ರೋಹಿಯ ಬಾಯಿಯಲ್ಲಿ ಇಡುವನು: "ಅವರು ಮೂವತ್ತು ತೊಲ ಬೆಳ್ಳಿಯನ್ನು ತೂಗಿ ನನ್ನ ಸಂಬಳಕ್ಕಾಗಿ ಕೊಟ್ಟರು" (ಜೆಕರ್ಯ 11:12ಬಿ). ಒಂದು ಬೆಳ್ಳಿಯ ತುಂಡು ಸುಮಾರು 64 ಸೆಂಟುಗಳ ಬೆಲೆಯುಳ್ಳದ್ದು ಹಾಗೂ ಮೂವತ್ತು ತುಂಡುಗಳು ಒಬ್ಬ ಗುಲಾಮನ ಬೆಲೆಯಾಗಿತ್ತು (ವಿಮೋಚನಕಾಂಡ 21:32).

ಸುಮಾರು ಐದು ನೂರು ವರ್ಷಗಳ ನಂತರ ಜೆಕರ್ಯನ ಮಾತುಗಳ ನೆರವೇರುವಿಕೆಯು ಗಮನಾರ್ಹವಾದದ್ದು ಆಗಿದೆ: "ಆಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯೂದನೆಂಬವನು ಮಹಾಯಾಜಕರ ಬಳಿಗೆ ಹೋಗಿ, 'ನಾನು ಅವನನ್ನು ನಿಮಗೆ ಹಿಡುಕೊಟ್ಟರೆ ನನಗೆ ಏನು ಕೊಡುತ್ತೀರಿ?' ಅಂದನು. ಅವರು ಅವನಿಗೆ ಮೂವತ್ತು ಬೆಳ್ಳಿ ನಾಣ್ಯಗಳನ್ನು ಕೊಟ್ಟರು" (ಮತ್ತಾಯ 26:14, 15).

## ದೇವರಿಂದ ಕೈಬಿಡಲ್ಪಟ್ಟವನು
## (ಕೀರ್ತನೆ 22:1)

ಅನೇಕ ಸಲ ದಾವೀದನು ಸೌಲನಿಂದ ಇಲ್ಲವೇ ಅಬ್ಷಾಲೋಮನಿಂದ ಹಿಡಿಯಲ್ಪಡಲು ಬೆನ್ನಟ್ಟಲ್ಪಟ್ಟಾಗ, ಗವಿಯಲ್ಲಿ ಇಲ್ಲವೇ ಅರಣ್ಯದಲ್ಲಿ ಅಡಿಗಿಕೊಳ್ಳಲು ಒತ್ತಾಯಿಸಲ್ಪಡುತ್ತಿದ್ದನು. ಅಂಥ ಸಮಯಗಳಲ್ಲಿ, ದೇವರು ಅವನಿಂದ ತನ್ನ ಸಹಾಯವನ್ನು ಹಿಂತೆಗೆದು ಕೊಂಡಿರಬೇಕೆಂದು ಯೋಚಿಸಿರಬಹುದು. "ನನಗೂ ಮರಣಕ್ಕೂ ಒಂದು ಗೇಣು ಅಂತರವಿರುವ" (1 ಸಮುವೇಲ 20:3) ಸಮಯವಿದ್ದಾಗ, ಅಂಥ ಅತ್ಯವಸರದ ಸಮಯಗಳಲ್ಲಿ, "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನ ಕೈಬಿಟ್ಟಿದ್ದೀ?" (ಕೀರ್ತನೆ 22:1ಎ) ಎಂದು ಕೂಗುವುದು ದಾವೀದನಿಗೆ ಮಾನವೀಯವಾದದ್ದಾಗಿತ್ತು. ದೇವರು ಅವನನ್ನು ತೊರೆದು ಬಿಡಲಿಲ್ಲ. ಯಾಕಂದರೆ ಸುಳ್ಳು ಹೇಳದ, ಪಕ್ಷಪಾತ ತೋರಿಸದ ದೇವರು ತನ್ನ ಜನರಿಗೆ, "ನಾನು ನಿನ್ನನ್ನು ಕೈಬಿಡುವದಿಲ್ಲ, ತೊರೆದು ಬಿಡುವದಿಲ್ಲ" (ಯೆಹೋಶುವ 1:5ಸಿ; ನೋಡಿರಿ ಇಬ್ರಿಯ 13:5) ಎಂದು ವಾಗ್ದಾನ ಮಾಡಿದ್ದಾನೆ. ಹೀಗಿದ್ದರೂ ಮಾನವ ರೀತಿಯಿಂದ ಮಾತಾಡುವಾಗ, ದೇವರಿಂದ ತಾನು ಕೈಬಿಡಲ್ಪಟ್ಟಿದ್ದೇನೆಂದು ದಾವೀದನು ಭಾವಿಸಿದನು. ಅವನ ಕೂಗು ಅರ್ಥಮಾಡಿಕೊಳ್ಳಲ್ಪಡ ಬಹುದದ್ದಾಗಿದೆ.

ಒಂದು ಸಾವಿರ ವರ್ಷಗಳ ನಂತರ, ದಾವೀದನ ಮಗನು, ವೈರಿಗಳಿಂದ ಹಿಂಸಿಸಲ್ಪಟ್ಟು ಶಿಲುಬೆಯಿಂದ ಗಟ್ಟಿಯಾಗಿ ಕೂಗಿದನು, "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನ ಕೈಬಿಟ್ಟಿದ್ದೀ?" (ಮತ್ತಾಯ 27:46ಬಿ). ಸೂರ್ಯ ಬೆಳಕು ಮಧ್ಯಾಹ್ನದಿಂದ ಮೂರು ಗಂಟೆಯ ವರೆಗೆ ಯೇಸುವನ್ನು ಮರೆತು ಬಿಟ್ಟಿತು. ಆತನ ಶಿಷ್ಯರು ಓಡಿ ಹೋಗಿ

ದ್ದರು. ದಾವೀದನ ವಿಷಯದಲ್ಲಿ ದೇವರು ತಳ್ಳಿಬಿಟ್ಟದ್ದು ನಿಜವಾದದ್ದಾಗಿರಲಿಲ್ಲ; ಪೀಡಿಸಲ್ಪಟ್ಟ ಮತ್ತು ಚಿಂತೆಗೊಳಗಾದ ಮನುಷ್ಯನಿಗೆ ಅದು ಆ ರೀತಿಯಲ್ಲಿ ಕಂಡು ಬಂದಿತು. ಯೇಸುವಿನ ವಿಷಯದಲ್ಲಿ ದೇವರಿಂದ ಮರೆಯಲ್ಪಟ್ಟದ್ದು ನಿಜವಾದದ್ದಾಗಿತ್ತು. ಶಿಲುಬೆಗೆ ಹಾಕಲ್ಪಟ್ಟ ಸಮಯದಲ್ಲಿ, ಯೇಸುವು ಪಾಪದ ಪ್ರತಿರೂಪ ಆಗಿದ್ದನು. "ದೇವರಿಗೆ ನಾವು ನೀತಿಸ್ವರೂಪಿಗಳಾಗುವಂತೆ ಆತನನ್ನು ಪಾಪವಾಗ ಮಾಡಿದನು" (2 ಕೊರಿಂಥ 5:21). ಶುದ್ಧನಾದ ದೇವರು ದುಷ್ಟತನದ ಕಡೆಗೆ ನೋಡಲಾರದವನಾಗಿದ್ದುದರಿಂದ (ಹಬಕ್ಕೂಕ 1:13), ಆತನು ತನ್ನ ಕಣ್ಣುಗಳನ್ನು ಬೇರೆ ಕಡೆಗೆ ತಿರುಗಿಸ ಬೇಕಾಗಿತ್ತು. ಯೇಸು ಅದನ್ನು ಅರಿತುಕೊಂಡನು, ಯಾಕಂದರೆ ತನ್ನ ಅಸ್ತಿತ್ವದ ಮೊದಲ ಸಲ, ಆತನ ತಂದೆಯು ಆತನಿಂದ ದೂರತಿರುಗಿಕೊಂಡಿದ್ದನು.

"ಮರಕ್ಕೆ ತೂಗಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ" (ಧರ್ಮೋಪದೇಶಕಾಂಡ 21:23) ಎಂದು ಧರ್ಮಶಾಸ್ತ್ರವು ಹೇಳಿತ್ತು. ಆದುದರಿಂದ, "ಮರಕ್ಕೆ ತೂಗುಹಾಕಲ್ಪಟ್ಟ ಪ್ರತಿಯೊಬ್ಬನು ಶಾಪಗ್ರಸ್ತನು" (ಗಲಾತ್ಯ 3:13ಬಿ). ಯೇಸು ನಮಗಾಗಿ ಶಾಪಗ್ರಸ್ತನಾದನು.

ಅಂಥ ರೀತಿಯ ನಡುಸುವಿಕೆಗೆ ಆತನು ಯಾವುದೇ ರೀತಿಯಲ್ಲಿ ಅರ್ಹನಾಗಿರಲಿಲ್ಲ. ಪೆಟ್ಟು ಹೊಂದಬೇಕಾದವರು ತಪ್ಪಿಸಿಕೊಂಡು ಹೋದರು (ಯೆಶಾಯ 53:8), ದೇವರು "ನಮ್ಮೆಲರ ದೋಷಫಲವನ್ನು ಆತನ ಮೇಲೆ ಹಾಕಿದನು" (ಯೆಶಾಯ 53:6). ತನ್ನ ತಂದೆಯು, "ನನ್ನನ್ನು ಒಬ್ಬಂಟಿಗನನ್ನಾಗಿ ಬಿಡುವದಿಲ್ಲ" ಎಂದು (ಯೋಹಾನ 8:29ಬಿ) ಯೇಸು ಆನಂದದ ದಿನಗಳಲ್ಲಿ ಮಹಿಮೆಪಡಿಸಿದ್ದನು. "ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ" (ಯೋಹಾನ 11:42ಎ) ಎಂಬ ಈ ಭರವಸೆಯಲ್ಲಿ ಆತನು ಆನಂದಪಟ್ಟನು. ಹೀಗಿದ್ದರೂ, ಶಿಲುಬೆಯ ಮೇಲೆ ದೇವರು ಲಾಲಿಸಲಿಲ್ಲ; ಅಲ್ಲಿ ದೇವರು ಆತನನ್ನು ಒಬ್ಬಂಟಿಗನನ್ನಾಗಿ ಬಿಟ್ಟನು, ಒಬ್ಬಂಟಿಗನಾಗಿದ್ದನು! ಆ ಏಕಾಂಗಿಕತೆಯನ್ನು ಯೇಸು ಅನುಭವಿಸಿದನು!

ಲೋಕವನ್ನು ರಕ್ಷಿಸುವದಕ್ಕಾಗಿ ತಾನು ಪಾಪವಾಗತಕ್ಕದ್ದು ಮತ್ತು ಹಾಗೆ ಮಾಡುವಲ್ಲಿ ತಾನು ದೇವರಿಂದ ಕೈಬಿಡಲ್ಪಡತಕ್ಕವನಾಗತಕ್ಕದ್ದು ಎಂದು ಯೇಸು ತಿಳಿದಿದ್ದನು. ಹಾಗಾದರೆ, ತನ್ನ ತಂದೆಯು ತನ್ನೊಂದಿಗೆ ಇರದೆ ಇರುವದನ್ನು ಅರ್ಥಮಾಡಿಕೊಳ್ಳದೆ ಇದ್ದಂತೆ, ಆತನು ಯಾಕೆ ದೊಡ್ಡ ಧ್ವನಿಯಿಂದ ಕೂಗಿದನು? ಬಹುಶಃ ಈ ಜೀವನದಲ್ಲಿ ನಾವು ಇದನ್ನು ತಿಳಿಯಲಾರದೆ ಹೋಗುವೆವು; ಆಳವಾದ ಯಾತನೆಯಲ್ಲಿದ್ದ ಯೇಸುವಿನ ಮಾನವ ಭಾಗ ಮಾತ್ರವೇ ಆದಾಗಿತ್ತು.

## ಪುನಃ ಜೀವಿಸಿದ ಶವ

## (ಕೀರ್ತನೆ 16:10)

ಕೀರ್ತನೆ 16:10 ಯೇಸುವಿಗೆ ಮಾತ್ರವೇ ಸಂಬಂಧಿಸಿದ ಅರ್ಥವುಳ್ಳ ಏಕೈಕವಾಗಿ ಮುಂತಿಳಿಸಿದ ಪ್ರವಾದನೆಯಾಗಿರುವದೆಂದು ತೋರುತ್ತದೆ: "ಯಾಕಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ; ನಿನ್ನ ಪರಿಶುದ್ಧನ ಕೊಳಯುವಿಕೆಯನ್ನು, ಅವಸ್ಥೆಯನ್ನು ನೋಡಗೊಡಿಸುವದಿಲ್ಲ" (ಕೀರ್ತನೆ 16:10). ಈ ನಿರ್ದಿಷ್ಟವಾದ ಮುಂತಿಳಿಸುವಿಕೆಯಲ್ಲಿ ದಾವೀದನು ತನ್ನ ಬಗ್ಗೆ ಬರೆಯುತ್ತಿರುವದಿಲ್ಲ. ಅವನು ಮರಣ ಹೊಂದಿದ ನಂತರ, "ತನ್ನ ಪಿತೃಗಳ ಬಳಿಯಲ್ಲಿ ಇಡಲ್ಪಟ್ಟು ಕೊಳೆಯುವ ಅವಸ್ಥೆಯನ್ನು ಅನುಭವಿಸಿದನು" (ಅಪೊಸ್ತಲರ ಕೃತ್ಯ 13:36). ಒಂದು ಸಾವಿರ ವರ್ಷಗಳ ನಂತರ,

ದಾವೀದನ ತೆರೆಯಲ್ಪಡದ ಸಮಾಧಿಯ ಬಗ್ಗೆ ಸಂಬಂಧಿಸಿ ಹೀಗೆ ಹೇಳಿದನು: "ಸಹೋದರರೇ, ಮೂಲ ಪಿತೃವಾದ ದಾವೀದನ ವಿಷಯದಲ್ಲಿ ನಾನು ಧೈರ್ಯದಿಂದ ನಿಮ್ಮ ಸಂಗಡ ಮಾತಾಡಬಹುದು ಏನಂದರೆ, ಅವನು ತೀರಿಹೋಗಿ ಹೂಣಲ್ಪಟ್ಟನು; ಅವನ ಸಮಾಧಿ ಈ ದಿನದವರೆಗೂ ನಮ್ಮಲ್ಲಿದೆ" (ಅಪೊಸ್ತಲರ ಕೃತ್ಯ 2:29).

ಪ್ರವಾದಿಯಾಗಿದ್ದು (ಅಪೊಸ್ತಲರ ಕೃತ್ಯ 2:30), ದಾವೀದನು ಮುನ್ನೋಡಲು ಶಕ್ತನಾಗಿದ್ದನು (ಅಪೊಸ್ತಲರ ಕೃತ್ಯ 2:31). ಅವನು ಕೀರ್ತನೆ 16:10 ಬರೆದಾಗ, "ಕ್ರಿಸ್ತನ ಪುನರುತ್ಥಾನವನ್ನು ಕುರಿತು, ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆಯುವ ಅವಸ್ಥೆಯನ್ನನುಭವಿಸುವದಿಲ್ಲವೆಂತಲೂ" (ಅಪೊಸ್ತಲರ ಕೃತ್ಯ 2:31, 32ಎ) ಮತ್ತು "ದೇವರು ಎಬ್ಬಿಸಿದಾತನು ಕೊಳೆಯುವ ಅವಸ್ಥೆಯನ್ನು ಅನುಭವಿಸಲಿಲ್ಲ" (ಅಪೊಸ್ತಲರ ಕೃತ್ಯ 13:37) ಎಂದೂ ಹೇಳಿದನು.

© 2009 Truth for Today